# ಮೇಘಲೋಕ



■ ಚಿತ್ರ– ಲೇಖನ: **ಆರ್. ವಿಶ್ವನಾಥ್**

ಬೆಂಗಳೂರಿಗೆ ಸಮೀಪವಿರುವ ಚಿಕ್ಕಬಳ್ಳಾಪುರ ಗಿರಿದುರ್ಗಗಳಿಗೆ ಪ್ರಸಿದ್ಧ. ದಿಬ್ಬಗಿರಿ, ಬ್ರಹ್ಮಗಿರಿ, ನಂದಿಗಿರಿ, ಚನ್ನಗಿರಿ ಹಾಗೂ ಸ್ಕಂದಗಿರಿ ಇಲ್ಲಿನ ಪಂಚಗಿರಿಗಳು. ನಂದಿ ದುರ್ಗ ಪ್ರಸಿದ್ಧ ಗಿರಿಧಾಮ.

ಸಮುದ್ರ ಮಟ್ಟದಿಂದ ಸುಮಾರು 4760 ಅಡಿ ಎತ್ತರದಲ್ಲಿರುವ ಸ್ಕಂದ ಗಿರಿಯ ಸೂರ್ಯೋದಯ ಅವರ್ಣನೀಯ. ನಾವು ಬೆಟ್ಟದ ತುದಿ ತಲುಪಿದಾಗ ಸೂರ್ಯ ಮೂಡಿರಲಿಲ್ಲ. ನೋಡ ನೋಡುತ್ತಿದ್ದಂತೆ ಮೋಡಗಳ ದಂಡು ಇಡೀ ಕಣಿವೆಯನ್ನು ಆವರಿಸಿತ್ತು. ಉದಯಿಸಿದ ಸೂರ್ಯ ಕಾಣದಷ್ಟು ದಟ್ಟ ಮೋಡಗಳು! ಈ ಭರಾಟೆಯಲ್ಲಿ ದಿನಕರ ಬಂಧಿಯಾಗಿ ಇನ್ನು ಬೆಳಕು ಮೂಡದೇನೋ ಎಂದುಕೊಳ್ಳುತ್ತಿದ್ದಂತೆ ಗಡಿಯಾರದ ಮುಳ್ಳು ಏಳು ಸಮೀಪಿಸಿತ್ತು.

ಶ್ವೇತವರ್ಣದ ಮೋಡಗಳು ಇನ್ನು ಮೇಲಕ್ಕೇಳದೆ ತಟಸ್ಥವಾದಂತಿದ್ದವು. ಕೆಲ ಸಮಯದ ನಂತರ ಬೀಸಿದ ಮಂದ ಮಾರುತದಿಂದ ಮೋಡಗಳು ಚದುರಿದವು. ನೋಡ ನೋಡುತ್ತಿದ್ದಂತೆ ಹೊಂಬೆಳಕು ಗಿರಿಯನ್ನು ಆವರಿಸಿತು.

ನಿಧಾನವಾಗಿ ಸೂರ್ಯನ ವಿಕಿರಣ ಬಣ್ಣಗಳು ರೂಪಗೊಂಡು ಕೆಂಪು, ಗುಲಾಬಿ ಮತ್ತು ಕಿತ್ತಳೆ ಬಣ್ಣದ ಗಾಢ ಗೆರೆಗಳು ಗೋಚರಿಸಿದವು. ಬಾನಂಗಳದ ಪರದೆಯ ಮೇಲೆ ಬಣ್ಣಗಳ ಓಕುಳಿಯಾಟ ಶುರುವಾಗಿ ಮಾಯಲೋಕದಂತೆ ಭಾಸವಾಯಿತು. ಕುತೂಹಲಕ್ಕೆ ಕೊಂಚ ಮುಂದೆ ಸಾಗಿ ಕಣಿವೆ ಇಣುಕಿ ನೋಡಿದರೆ ಎದೆ ಝಲ್ ಎಂದಿತು. ಸುಮಾರು 2000 ಅಡಿಗೂ ಹೆಚ್ಚು ಪ್ರಪಾತದಲ್ಲಿರುವ ಕಡಿದಾದ ಕಣಿವೆ!